# ಯೋಗಶಾಸ್ತ್ರವಾಗಿ ಭಗವದ್ಗೀತೆ

ಸ್ವಾಮಿ ವೀರೇಶಾನಂದ

ಗೀತೆಯ ಪ್ರತಿಯೊಂದು ಅಧ್ಯಾಯವನ್ನೂ ಯೋಗವೆಂದೇ ಪರಿಗಣಿಸಲಾಗುತ್ತಿದೆ. ಎಲ್ಲ ಯೋಗಗಳ ಸಾಮರಸ್ಯ, ಸಮನ್ವಯ ಗೀತೆಯಲ್ಲಿದೆ. ಈ ಕುರಿತು ವಿವರಿಸುವ ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಭಗವದ್ಗೀತೆಯು ಬ್ರಹ್ಮವಿದ್ಯೆಯೆಂದು ಪ್ರಸಿದ್ಧವಾಗಿದೆ. ಈ ಶಾಸ್ತ್ರವು ಉಪನಿಷತ್ತಿಗೆ ಸಮಾನವಾದುದು. ಉಪನಿಷತ್ತು ನಿತ್ಯ ಸತ್ಯವಾದ ಬ್ರಹ್ಮತತ್ತ್ವ ಅಥವಾ ಆತ್ಮತತ್ತ್ವವನ್ನು ಉಪದೇಶ ಮಾಡುತ್ತದೆ. ಉಪನಿಷತ್ತುಗಳು ಒಂದು ಗೋವಿನಂತೆ ಇದೆ. ಭಗವದ್ಗೀತೆಯು ಈ ಹಸುವು ನೀಡುವ ಹಾಲು. ಕೃಷ್ಣನು ಹಾಲು ಕರೆಯುವವನು. ಅರ್ಜುನನು ಕರು. ತನ್ನ ಕರುವಿಗಾಗಿ ಮಾತ್ರವೇ ಹಸುವು ಹಾಲು ಕೊಡುವುದಿಲ್ಲ. ಅದರ ಹಾಲನ್ನು ಎಲ್ಲರೂ ಕುಡಿಯುತ್ತಾರೆ. ಇದರಂತೆ ಗೀತೆಯ ಉಪದೇಶವು ಕೇವಲ ಅರ್ಜುನನಿಗೆ ಮಾತ್ರವಲ್ಲ, ಇಡೀ ಮಾನವತೆಗಾಗಿ ಇದೆ. ಈ ರೀತಿಯಲ್ಲಿ ಭಗವದ್ಗೀತೆಯು ನಿಜವಾದ ಬ್ರಹ್ಮವಿದ್ಯೆಯಾಗಿದೆ. ಹೀಗೆಂದೇ ಪ್ರತಿ ಅಧ್ಯಾಯದ ಕೊನೆಯಲ್ಲಿ ಹೀಗೆ ಹೇಳುವ ಪರಿಪಾಠ ಇದೆ:

**ಇತಿ ಶ್ರೀಮದ್ಭಗವದ್ಗೀತಾಸು ಉಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ..**

ಮೇಲೆ ಹೇಳಿದ ಉಕ್ತಿಯಂತೆ ಭಗವದ್ಗೀತೆಯು ಯೋಗ ಶಾಸ್ತ್ರವು ಕೂಡ. ಬ್ರಹ್ಮವಿದ್ಯೆಯು 'ಸಾಧ್ಯ'; ಯೋಗವು 'ಸಾಧನ'. ಬ್ರಹ್ಮಜ್ಞಾನವು ಗುರಿ. ಇದನ್ನು ಸಿದ್ಧಿಸಿಕೊಳ್ಳಲು ಯೋಗವನ್ನು ಅಭ್ಯಾಸ ಮಾಡಬೇಕು. ಭಗವದ್ಗೀತೆಯು ಬ್ರಹ್ಮಜ್ಞಾನವೆಂದರೆ ಏನು ಎಂದು ತಿಳಿಸಿಕೊಡುತ್ತದೆ. ಅದೇ ರೀತಿ, ಅದಕ್ಕೆ ಬೇಕಾದ ಯೋಗವೆಂಬ ಹೆಸರಿನ ಆಧ್ಯಾತ್ಮಿಕ ಸಾಧನೆಯನ್ನೂ ಹೇಳಿಕೊಡುತ್ತದೆ. ಇದೇ ಭಗವದ್ಗೀತೆಯ ವೈಶಿಷ್ಟ್ಯ.

## ಗೀತೆಯ ಉದ್ದೇಶ

ಶ್ರೀಶಂಕರಾಚಾರ್ಯರು ಭಗವದ್ಗೀತೆಗೆ ಮೊಟ್ಟಮೊದಲು ಭಾಷ್ಯವನ್ನು ಬರೆದ ಮಹನೀಯರು. ಅವರ ಪ್ರಕಾರ ಭಗವದ್ಗೀತೆಯು ಅರ್ಜುನನ ಶೋಕ ಮತ್ತು ಮೋಹಗಳನ್ನು ಕಳೆಯುವುದಕ್ಕಾಗಿ ಶ್ರೀಕೃಷ್ಣನು ಉಪದೇಶಿಸಿದ ಮೋಕ್ಷಶಾಸ್ತ್ರ. ಇದಕ್ಕಾಗಿ ಶ್ರೀಕೃಷ್ಣನು ಎರಡು ರೀತಿಯ ಧರ್ಮಮಾರ್ಗಗಳನ್ನು ಉಪದೇಶಿಸಿದನು. ಒಂದು ಪ್ರವೃತ್ತಿಧರ್ಮ. ಇದನ್ನೇ ಸಾಧಾರಣ ಭಾಷೆಯಲ್ಲಿ ಕರ್ಮಯೋಗ ಎನ್ನುತ್ತಾರೆ. ಇನ್ನೊಂದು ನಿವೃತ್ತಿಧರ್ಮ. ಇದನ್ನು ಸಂನ್ಯಾಸಯೋಗ ಎನ್ನುತ್ತಾರೆ. ಪ್ರವೃತ್ತಿಧರ್ಮದಲ್ಲಿ ವೇದಗಳು ಹೇಳಿದ ಕರ್ಮಗಳನ್ನು ಮತ್ತು ಭಗವಂತನ ಧ್ಯಾನವನ್ನು ಮಾಡಬೇಕು. ಇವುಗಳನ್ನು ಈ ಜಗತ್ತಿನಲ್ಲಿ ಸಿಗುವ ಸಂಪತ್ತಿಗಾಗಿ ಅಥವಾ ಸತ್ತಮೇಲೆ ಹೋಗುವ ಉನ್ನತ ಲೋಕಗಳ ಸಲುವಾಗಿ ಮಾಡಿದರೆ, ಅದು ಕಾಮ್ಯಕರ್ಮವೆನಿಸುತ್ತದೆ. ಅದರಿಂದ ಉಂಟಾಗುವ ಫಲವನ್ನು **ಅಭ್ಯುದಯ** ಎನ್ನುತ್ತಾರೆ. ನಿಜವಾದ ಸಂನ್ಯಾಸವು ತ್ಯಾಗ ಮತ್ತು ನಿರಾಸಕ್ತಿಗಳಲ್ಲಿ ಅಡಗಿದೆ. ಅದಕ್ಕಾಗಿ ಆತ್ಮಜ್ಞಾನ ಆವಶ್ಯಕ. ಇದರಿಂದ ನಿತ್ಯವಾದ ಮೋಕ್ಷವೇ ದೊರಕಿಬಿಡುವುದು. ಈ ಫಲವನ್ನು **ನಿಃಶ್ರೇಯಸ** ಎಂದು ಕರೆಯುತ್ತಾರೆ. ಭಗವದ್ಗೀತೆಯು ಎರಡನ್ನೂ ಉಪದೇಶಿಸುತ್ತದೆ. ಇದರಿಂದ ಮೇಲೆ ಹೇಳಿದ ಎರಡು ಫಲಗಳನ್ನೂ ಪಡೆದುಕೊಳ್ಳಬಹುದು. ಇದನ್ನೇ ಶ್ರೀಶಂಕರಾಚಾರ್ಯರು '**ಪ್ರಾಣಿನಾಂ ಸಾಕ್ಷಾತ್ ಅಭ್ಯುದಯನಿಃಶ್ರೇಯಸಹೇತುಃ ಸ ಧರ್ಮಃ**'; 'ಜೀವಿಗಳಿಗೆ ಯಾವುದರಿಂದ ಅಭ್ಯುದಯ ಮತ್ತು ನಿಃಶ್ರೇಯಸಗಳೆರಡೂ ದೊರಕುತ್ತವೆಯೋ ಅದೇ ಧರ್ಮ' ಎನ್ನುತ್ತಾರೆ. ಭಗವದ್ಗೀತೆಯು ಎರಡನ್ನೂ ಬೋಧಿಸುತ್ತದೆ ಎಂದು ಸೂಚಿಸುತ್ತಾರೆ. ಹೀಗೆ ಭಗವದ್ಗೀತೆಯು ಸಮಸ್ತವೇದದ ಅರ್ಥವನ್ನು ಸಾರಸಂಗ್ರಹವಾಗಿ ಬೋಧಿಸುವ ಶಾಸ್ತ್ರವಾಗಿದೆ ಎಂದು ಅವರು ಬಣ್ಣಿಸುತ್ತಾರೆ **(ಸಮಸ್ತ ವೇದಾರ್ಥಸಾರಸಂಗ್ರಹಭೂತಂ).**

ಆದರೆ ಗೀತೆಯ ಉದ್ದೇಶ ಅಭ್ಯುದಯವಲ್ಲ, ನಿಃಶ್ರೇಯಸ ಎಂದು ಶ್ರೀ ಶಂಕರಾಚಾರ್ಯರು ಸ್ಪಷ್ಟಪಡಿಸುತ್ತಾರೆ. ಇದನ್ನು ಸಾಧಿಸಿಕೊಳ್ಳುವುದಕ್ಕೆ ಜನ್ಮಮರಣ ಚಕ್ರದಿಂದ ನಾವು ಬಿಡುಗಡೆ ಹೊಂದಬೇಕು. ಅದಕ್ಕಾಗಿ ತ್ಯಾಗ ಮತ್ತು ನಿರಾಸಕ್ತಿಯ ಸಂನ್ಯಾಸ ಜೀವನವನ್ನು ನಡೆಸುವ ಅರ್ಹತೆಯನ್ನು ಪಡೆದುಕೊಳ್ಳಬೇಕು.

ಆಗ ಮಾತ್ರ ಆತ್ಮಜ್ಞಾನ ಲಭಿಸುತ್ತದೆ. ಆತ್ಮಸಾಕ್ಷಾತ್ಕಾರವಾಗುತ್ತದೆ. ಇದನ್ನೇ ನಿಃಶ್ರೇಯಸ ಎನ್ನುವುದು. ಅಂತಿಮವಾಗಿ ಗೀತೋಪದೇಶದ ಗುರಿಯು ಇದೇ ಎಂದು ಶ್ರೀ ಶಂಕರಾಚಾರ್ಯರು ಪ್ರತಿಪಾದಿಸುತ್ತಾರೆ. ಆತ್ಮಜ್ಞಾನಕ್ಕೆ ಅರ್ಹತೆ ಪಡೆಯಲು ಸಾಧಾರಣ ಜನರು ಕರ್ಮಯೋಗದ ಜೊತೆಗೆ ಭಕ್ತಿಯೋಗ ಮತ್ತು ಧ್ಯಾನಯೋಗಗಳನ್ನೂ ಸೇರಿಸಿಕೊಂಡು ಸಾಧನೆ ಮಾಡಬೇಕು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ಇದರಿಂದ ಮಾತ್ರವೇ ಆತ್ಮಜ್ಞಾನಕ್ಕೆ ಯೋಗ್ಯತೆ ಬರುತ್ತದೆ; ತ್ಯಾಗ ಮತ್ತು ನಿರಾಸಕ್ತಿಗಳು ಸಾಧ್ಯವಾಗುತ್ತವೆ. ಇದನ್ನೇ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದನು. ಇದು ಶ್ರೀಶಂಕರಾಚಾರ್ಯರ ಅಭಿಪ್ರಾಯ.

### ಭಗವದ್ಗೀತೆಯ ಪ್ರಕಾರ ಯೋಗವೆಂದರೇನು?

ಭಗವದ್ಗೀತೆಯಲ್ಲಿ ಯೋಗವನ್ನು ಸಾಧ್ಯರೂಪವಾಗಿ ಅಲ್ಲದೆ ಸಾಧನರೂಪವಾಗಿ ಕೂಡ ಉಪದೇಶ ಮಾಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ '**ಸಮತ್ವಂ ಯೋಗ ಉಚ್ಯತೇ**'; 'ಸಮತ್ವವನ್ನೇ ಯೋಗವೆಂದು ಹೇಳಲಾಗಿದೆ' ಎಂಬ ಮಾತು ಬರುತ್ತದೆ. ಇದು ಸಾಧಕನ ಗುರಿ, ಅಂತಿಮವಾಗಿ ಪಡೆದು ಕೊಳ್ಳಬೇಕಾದ ಸ್ಥಿತಿ. ಅದೇ ರೀತಿ '**ಯೋಗಃ ಕರ್ಮಸು ಕೌಶಲಂ**'; 'ಯೋಗವೆಂದರೆ ಕರ್ಮದ ಕುಶಲತೆ' ಎಂಬ ಬೋಧನೆಯೂ ಇದೆ. ಇದು ಸಾಧಕನು ಮಾಡಬೇಕಾದ ಸಾಧನೆ. ಇಲ್ಲಿ ಕೌಶಲವೆಂದರೆ ಹೊರಗಿನ ನಿಪುಣತೆಯಲ್ಲ. ಫಲದ ಆಸೆಯನ್ನು ಬಿಟ್ಟು, ನಿರಾಸಕ್ತಿಯಿಂದ, ಭಗವಂತನ ಆರಾಧನೆ ಎಂದು ಕರ್ಮಗಳನ್ನು ಮಾಡುವುದು. ಇದೇ ನಿಜವಾದ ಕರ್ಮದ ಕೌಶಲ. ಈ ಎರಡೂ ವ್ಯಾಖ್ಯಾನಗಳನ್ನು ನಾವು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿಯೇ ಕಾಣುತ್ತೇವೆ.

ಇನ್ನು ಆರನೆಯ ಅಧ್ಯಾಯದಲ್ಲಿ ಯೋಗವನ್ನು ವಿಯೋಗದ ಅರ್ಥದಲ್ಲಿ ವ್ಯಾಖ್ಯಾನಿಸಲಾಗಿದೆ. '**ತಂ ವಿದ್ಯಾದ್ ದುಃಖಸಂಯೋಗವಿಯೋಗಂ ಯೋಗಸಂಜ್ಞಿತಂ**'; 'ದುಃಖದೊಡನೆ ನಮಗಿರುವ ಸಂಯೋಗದಿಂದ ಬಿಡಿಸಿಕೊಳ್ಳುವುದೇ, ಪ್ರತ್ಯೇಕಿಸಿಕೊಳ್ಳುವುದೇ ಯೋಗವೆಂದು ಕರೆಯಲ್ಪಡುತ್ತದೆ.' ದುಃಖವು ಅಜ್ಞಾನದಿಂದ ಉಂಟಾಗುತ್ತದೆ. ಯೋಗವು ಜ್ಞಾನವನ್ನು ದೊರಕಿಸಿ ಕೊಡುತ್ತದೆ. ಆ ಮೂಲಕ ದುಃಖದಿಂದ ಬಿಡಿಸಿ, ಮೋಕ್ಷವನ್ನು ಉಂಟುಮಾಡುತ್ತದೆ.

### ಜ್ಞಾನ ಮತ್ತು ಜ್ಞೇಯವಾಗಿ ಯೋಗ

ಗೀತೆಯಲ್ಲಿ ಯೋಗವು ಜ್ಞಾನವೂ ಹೌದು, ಜ್ಞೇಯವೂ ಹೌದು. ಜ್ಞೇಯವೆಂದರೆ, ಯಾವುದರ ಜ್ಞಾನಕ್ಕಾಗಿ ನಾವು ಸಾಧನೆಯನ್ನು ಮಾಡುತ್ತೇವೆಯೋ, ಅದು. ಬ್ರಹ್ಮ, ಆತ್ಮ, ಈಶ್ವರ ಇದೇ ಜ್ಞೇಯ ವಸ್ತು. ಈ ತತ್ತ್ವದ ಅರಿವು ಅಥವಾ ತಿಳಿವಳಿಕೆಯೇ ಜ್ಞಾನ. ಭಗವದ್ಗೀತೆಯು ಜ್ಞೇಯವನ್ನೂ ಉಪದೇಶಿಸುತ್ತದೆ; ಜ್ಞಾನವನ್ನೂ ಬೋಧಿಸುತ್ತದೆ. ಇವರೆರಡೂ ಆಧ್ಯಾತ್ಮಿಕ ಸಿದ್ಧಿಗೆ ಆವಶ್ಯಕ. ಹೀಗೆ ಜ್ಞಾನ, ಜ್ಞೇಯಗಳೆರಡೂ ಯೋಗವೇ ಆಗಿವೆ.

ಮೊದಲು ನಾವು ತಿಳಿದುಕೊಳ್ಳಬೇಕಾದ ಜ್ಞೇಯವಸ್ತುಗಳ ಬಗ್ಗೆ ಭಗವದ್ಗೀತೆಯು ಏನುಹೇಳುತ್ತದೆ ಎಂಬ ಬಗ್ಗೆ ವಿಚಾರ ಮಾಡೋಣ:

**೧. ಆತ್ಮ :** ಎರಡನೆಯ ಅಧ್ಯಾಯದ ಸಾಂಖ್ಯಯೋಗದಲ್ಲಿ ಆತ್ಮತತ್ತ್ವದ ಲಕ್ಷಣಗಳನ್ನು ವಿಶೇಷವಾಗಿ ಬಣ್ಣಿಸಲಾಗಿದೆ. ಚೈತನ್ಯರೂಪವಾದ ಆತ್ಮತತ್ತ್ವವೇ ಆತ್ಯಂತಿಕ ಸತ್ಯವೆಂದು ಪ್ರತಿಪಾದಿಸಲಾಗಿದೆ.

**೨. ಧ್ಯೇಯ : ಧ್ಯಾನದ ವಿಷಯ :** ಭಗವದ್ಗೀತೆಯ ಏಳನೆಯ ಅಧ್ಯಾಯ ಜ್ಞಾನವಿಜ್ಞಾನ ಯೋಗ. ಇದರಲ್ಲಿ ಧ್ಯಾನವನ್ನು ಮಾಡಬೇಕಾದ ಪರಮಾತ್ಮನ ರೂಪವನ್ನು ನಿರ್ದಿಷ್ಟವಾಗಿ ವಿವರಿಸಲಾಗಿದೆ. ಶ್ರೀಕೃಷ್ಣನು ಈ ಧ್ಯೇಯವಸ್ತುವನ್ನು ಆರನೆಯ ಅಧ್ಯಾಯದ ಕಡೆಯ ಶ್ಲೋಕದಲ್ಲಿ ಹೀಗೆ ಬೋಧಿಸುತ್ತಾನೆ *(೬.೪೭)* : **ಮದ್ಗತೇನ ಅಂತರಾತ್ಮನಾ** : 'ಯೋಗಿಗಳಲ್ಲಿ ಯಾರು



ತಮ್ಮ ಮನಸ್ಸನ್ನು ನನ್ನಲ್ಲಿ ಕೇಂದ್ರೀಕರಿಸುವನೋ, ಅವನನ್ನೇ ನಾನು ಯೋಗಿಗಳಲ್ಲೆಲ್ಲ ಉತ್ತಮನೆಂದು ಭಾವಿಸುತ್ತೇನೆ.' ಇದಕ್ಕೆ ತಮ್ಮ ವ್ಯಾಖ್ಯಾನವನ್ನು ಬರೆಯುತ್ತ ಶ್ರೀ ಶಂಕರಾಚಾರ್ಯರು, ''ಇಲ್ಲಿ 'ನನ್ನಲ್ಲಿ' ಎಂದರೆ, ವಾಸುದೇವನಾದ ನನ್ನಲ್ಲಿ ಎಂದು ಅರ್ಥಮಾಡಿಕೊಳ್ಳಬೇಕು'' ಎನ್ನುತ್ತಾರೆ. ವಾಸುದೇವನೆಂದರೆ ಇಡೀ ಜಗತ್ತನ್ನು ವ್ಯಾಪಿಸಿರುವ, ಜಗತ್ತನ್ನು ನಿಯಂತ್ರಿಸುವ ಭಗವತ್ತತ್ತ್ವ ಎಂದು ವಿವರಿಸುತ್ತಾರೆ.

**೩. ವಿಭೂತಿ: ಭಗವಂತನ ಸರ್ವಾತ್ಮಕ ಅಭಿವ್ಯಕ್ತಿ :** ಈಶ್ವರನಾದ ವಾಸುದೇವನು ತನ್ನ ಶಕ್ತಿಯ ಮೂಲಕ ಎಲ್ಲೆಲ್ಲೂ ಅಭಿವ್ಯಕ್ತಗೊಂಡಿದ್ದಾನೆ. ಇದನ್ನೇ 'ಈಶ್ವರೀಯ ಶಕ್ತಿ' ಎಂದೂ 'ವಿಭೂತಿ' ಎಂದು ಭಗವದ್ಗೀತೆಯು ತನ್ನ ೯,೧೦ ಮತ್ತು ೧೧ನೆಯ ಅಧ್ಯಾಯಗಳಲ್ಲಿ ಬಣ್ಣಿಸುತ್ತದೆ. ಈ ಅಧ್ಯಾಯಗಳು ಕ್ರಮವಾಗಿ: ರಾಜವಿದ್ಯಾರಾಜಗುಹ್ಯ ಯೋಗ, ವಿಭೂತಿಯೋಗ ಮತ್ತು ವಿಶ್ವರೂಪ ದರ್ಶನ ಯೋಗ. ವಿಶ್ವರೂಪವು ವಿಭೂತಿಗಳಲ್ಲೆಲ್ಲ ಶ್ರೇಷ್ಠವಾದುದು; ಇಡೀ ವಿಶ್ವವೇ ಭಗವಂತನ ವಿಭೂತಿ ಎನ್ನುವುದನ್ನು ತಿಳಿಸುವಂಥದ್ದು.

೪. **ಕ್ಷೇತ್ರಜ್ಞ : ಅಂತರ್ಯಾಮಿ ತತ್ತ್ವ :** ೧೩ನೆಯ ಅಧ್ಯಾಯವಾದ ಕ್ಷೇತ್ರಕ್ಷೇತ್ರಜ್ಞಯೋಗದಲ್ಲಿ ಪರಾಪ್ರಕೃತಿಯು ಕ್ಷೇತ್ರಜ್ಞನೆಂದೂ, ಅಪರಾಪ್ರಕೃತಿಯು ಕ್ಷೇತ್ರವೆಂದೂ ಬಣ್ಣಿಸಲಾಗಿದೆ. ಪರಾಪ್ರಕೃತಿಯೆಂದರೆ, ಭಗವಂತನ ಉತ್ತಮವಾದ ಶಕ್ತಿರೂಪ. ಅಪರಾಪ್ರಕೃತಿಯೆಂದರೆ ಭೌತಿಕ ತತ್ತ್ವಗಳು, ದೇಹ, ಮನಸ್ಸುಗಳು ಕೂಡಿರುವ ಪ್ರಕೃತಿ. ಅದು ಭಗವಂತನ ಕಡಮೆ ಮಟ್ಟದ ಶಕ್ತಿ. ಎಲ್ಲ ದೇಹಗಳಲ್ಲಿ ಇರುವ ಚೈತನ್ಯರೂಪವಾದ ಕ್ಷೇತ್ರಜ್ಞನು ನಾನೇ ಆಗಿದ್ದೇನೆ ಎಂದು ಕೃಷ್ಣನೇ ಈ ಅಧ್ಯಾಯದಲ್ಲಿ ಘೋಷಿಸುತ್ತಾನೆ.

ಮೇಲಿನ ತತ್ತ್ವಗಳನ್ನು ನಾವು ತಿಳಿದುಕೊಳ್ಳಬೇಕು, ಅನುಸಂಧಾನ ಮಾಡಬೇಕು. ಧ್ಯಾನಮಾಡಬೇಕು ಎನ್ನುವುದೇ ಭಗವದ್ಗೀತೆಯ ಆಶಯ.

### ಜ್ಞಾನವಾಗಿ ಯೋಗ : ಜ್ಞೇಯವಸ್ತುವನ್ನು ಪಡೆಯುವ ಸಾಧನೆ

ಭಗವದ್ಗೀತೆಯಲ್ಲಿ ಜ್ಞೇಯವನ್ನು ತಲುಪುವ ಸಾಧನವಾಗಿ ಇರುವ ಜ್ಞಾನವೆಂಬಂತೆಯೂ ಯೋಗವನ್ನು ಹಲವು ವಿಧವಾಗಿ ಬಣ್ಣಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಸಾಂಖ್ಯಬುದ್ಧಿ, ಅಂದರೆ ಜ್ಞಾನಯೋಗವನ್ನು ಮತ್ತು ಯೋಗಬುದ್ಧಿ, ಅಂದರೆ ಕರ್ಮಯೋಗವನ್ನೂ ಉಪದೇಶಿಸುತ್ತಾನೆ. ಅದನ್ನೇ ಇನ್ನಷ್ಟು ವಿವರವಾಗಿ ನಿರ್ದಿಷ್ಟವಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರಿಸುತ್ತಾನೆ. ಕರ್ಮಯೋಗ ಎಂಬ ಹೆಸರಿನ ಮೂರನೆಯ ಅಧ್ಯಾಯದಲ್ಲಿ ನಿರಾಸಕ್ತಿ ಮತ್ತು ಯಜ್ಞದ ಆದರ್ಶಗಳನ್ನು ನಮ್ಮ ಮುಂದೆ ಶ್ರೀಕೃಷ್ಣನು ಇಡುತ್ತಾನೆ. ಇವರೆಡೂ ಕರ್ಮಯೋಗದ ಅಭ್ಯಾಸಕ್ಕೆ ಅತ್ಯಂತ ಅವಶ್ಯಕವಾದ ಸಾಧನಗಳು. ನಾಲ್ಕನೆಯ ಯೋಗವಾದ ಜ್ಞಾನಯೋಗದಲ್ಲಿ ಬ್ರಹ್ಮಕರ್ಮದ ಆದರ್ಶವನ್ನು ಸಾಧಕರಿಗೆ ಶ್ರೀಕೃಷ್ಣನು ಬೋಧಿಸುತ್ತಾನೆ. ಬ್ರಹ್ಮಕರ್ಮವೆಂದರೆ ಕರ್ಮದ ಎಲ್ಲ ಅಂಗಗಳಲ್ಲಿಯೂ, ಆಚರಣೆಗಳಲ್ಲಿಯೂ ವಿಶ್ವವ್ಯಾಪಕ ತತ್ತ್ವವಾದ ಬ್ರಹ್ಮವನ್ನೇ ಕಾಣುವುದು. ಇದೇ ಒಬ್ಬ ಜ್ಞಾನಿಯ ನಿಜವಾದ ಲಕ್ಷಣ. ಐದನೆಯ ಅಧ್ಯಾಯವಾದ ಸಂನ್ಯಾಸಯೋಗದಲ್ಲಿ ಜ್ಞಾನಿಯು ಅವಶ್ಯವಾಗಿ ಬೆಳೆಸಿಕೊಳ್ಳಬೇಕಾದ ತ್ಯಾಗಬುದ್ಧಿಯ ವಿವರಣೆ ಇದೆ. ನಿರಾಸಕ್ತಿ ಮತ್ತು ಸಮತ್ವಬುದ್ಧಿಗಳೇ ಸಂನ್ಯಾಸದ ಲಕ್ಷಣಗಳು ಎಂಬ ಬೋಧನೆ ಅದರಲ್ಲಿ ಕಾಣಬರುತ್ತದೆ.

ಯೋಗದ ಬಾಹ್ಯ ಸಾಧನೆಯು ಕರ್ಮಯೋಗವಾದರೆ, ಆಂತರಿಕ ಸಾಧನೆಯು ಧ್ಯಾನಯೋಗ. ಇದನ್ನು ಆರನೆಯ ಅಧ್ಯಾಯದಲ್ಲಿ ವಿಶದವಾಗಿ ಶ್ರೀಕೃಷ್ಣನು ಉಪದೇಶಿಸುತ್ತಾನೆ. ಹಾಗೆಯೇ ಏಳನೆಯ ಅಧ್ಯಾಯವಾದ ಅಭ್ಯಾಸಯೋಗದಲ್ಲಿ ಕರ್ಮಯೋಗದ ಜೊತೆಗೆ ಧ್ಯಾನಯೋಗವನ್ನು ಬೆರೆಸಿಕೊಂಡು ಸತತವಾಗಿ ಅಭ್ಯಾಸ ಮಾಡಬೇಕು ಎಂಬ ಬೋಧನೆಯನ್ನು ಕಾಣುತ್ತೇವೆ. ಹಾಗೆಯೇ ಏಳನೆಯ ಆಧ್ಯಾಯವು ಸರ್ವತ್ರ ಭಗವಂತನ ಸಾನ್ನಿಧ್ಯವನ್ನು ಅಭ್ಯಾಸಮಾಡಬೇಕು ಎಂದೂ ನಮಗೆ ಹೇಳಿಕೊಡುತ್ತದೆ.

ಧ್ಯಾನಯೋಗದಲ್ಲಾಗಲಿ, ಕರ್ಮಯೋಗದಲ್ಲಾಗಲಿ ನಾವು ಭಗವಂತನ ಜೊತೆಗೆ ನಿಕಟ ಸಂಬಂಧವನ್ನು ಬೆಳೆಸಿಕೊಳ್ಳಬೇಕು; ಅದಕ್ಕಾಗಿ ಭಗವಂತನನ್ನು ಪ್ರೀತಿಸಬೇಕು; ನಮ್ಮ ಕರ್ಮ ಮತ್ತು ಧ್ಯಾನದ ಫಲಗಳನ್ನು ಅವನಿಗೆ ಸಮರ್ಪಿಸಬೇಕು. ಇದನ್ನು ಭಕ್ತಿಯೋಗವೆಂಬ ೧೨ನೆಯ ಅಧ್ಯಾಯವು ನಮಗೆ ಉಪದೇಶಿಸುತ್ತದೆ. ಭಕ್ತಿಯು ಧ್ಯಾನ ಮತ್ತು ಕರ್ಮಯೋಗಗಳ ಅಭ್ಯಾಸವನ್ನು ಸಶಕ್ತಗೊಳಿಸುತ್ತದೆ; ಪರಿಪುಷ್ಟಗೊಳಿಸುತ್ತದೆ.

### ಯೋಗಸಿದ್ಧನ ಲಕ್ಷಣಗಳು

ಪ್ರತಿಯೊಬ್ಬ ಸಾಧಕನೂ ಒಬ್ಬ ಸಿದ್ಧವ್ಯಕ್ತಿಯ ಆದರ್ಶವನ್ನು ಅನುಸರಿಸಬೇಕು. ಅದರಲ್ಲಿ ಅವನು ತನ್ನ ಧ್ಯೇಯದ ಸಾಕಾರ ರೂಪವನ್ನು ಕಾಣುವಂತಿರಬೇಕು. ಅಂಥ ಶ್ರೇಷ್ಠವ್ಯಕ್ತಿಯ ವಿಸ್ತಾರವಾದ ನಿರೂಪಣೆಯನ್ನು ನಾವು ೨ನೆಯ ಅಧ್ಯಾಯದಲ್ಲಿ ನೋಡುತ್ತೇವೆ. ಸ್ಥಿತಪ್ರಜ್ಞನೇ ಆ ಆದರ್ಶ ವ್ಯಕ್ತಿ. ಇಂಥದ್ದೇ ವಿವರಣೆಯನ್ನು ನಾವು ೧೨ನೆಯ ಅಧ್ಯಾಯದಲ್ಲಿ ಭಕ್ತನ ಲಕ್ಷಣಗಳ ರೂಪದಲ್ಲಿ, ೧೩ನೆಯ ಅಧ್ಯಾಯದಲ್ಲಿ ಜ್ಞಾನಿಯ ಲಕ್ಷಣಗಳ ರೂಪದಲ್ಲಿ ಮತ್ತು ೧೪ನೆಯ ಅಧ್ಯಾಯದಲ್ಲಿ ತ್ರಿಗುಣಾತೀತನ ಲಕ್ಷಣಗಳ ರೂಪದಲ್ಲಿ ಕಾಣಬಹುದು. ಈ ಎಲ್ಲ ವಿವರಣೆಗಳಲ್ಲಿ ಆಧ್ಯಾತ್ಮಿಕ ಆದರ್ಶದ ಸ್ವರೂಪವನ್ನು ಸುದೀರ್ಘವಾಗಿ ಶ್ರೀಕೃಷ್ಣನು ನಮ್ಮ ಮುಂದೆ ಇಡುತ್ತಾನೆ.

ಇದಲ್ಲದೆ ಯೋಗದ ಅಭ್ಯಾಸಕ್ಕೆ ಸಹಾಯವನ್ನು ಮಾಡುವ ಸಹಕಾರಿ ಸಾಧನೆಗಳನ್ನು ಕೂಡ ಭಗವದ್ಗೀತೆಯು ಉಪದೇಶಿಸುತ್ತದೆ. ಇವುಗಳನ್ನು ೧೬ನೆಯ ಅಧ್ಯಾಯವಾದ ದೈವಾಸುರ ಸಂಪದ್ವಿಭಾಗಯೋಗದಲ್ಲಿಯೂ, ೧೭ನೆಯ ಅಧ್ಯಾಯವಾದ ಶ್ರದ್ಧಾತ್ರಯ ಯೋಗದಲ್ಲಿಯೂ ಕೃಷ್ಣನು ವಿವರಿಸುತ್ತಾನೆ.

### ಭಗವದ್ಗೀತೆಯ ಸರ್ವಾಂಗೀಣ ಸ್ವರೂಪ

ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯವೂ ಯೋಗವೆಂಬ ಕೇಂದ್ರವಿಷಯವನ್ನೇ ಹೊಂದಿದೆ ಎನ್ನುವುದನ್ನು ನಾವು ಇದುವರೆಗೆ ಸಂಕ್ಷಿಪ್ತವಾಗಿ ನೋಡಿದೆವು. ಇದನ್ನು ಒಂದು ಬೈಸಿಕಲ್ಲಿನ ಗಾಲಿಯಲ್ಲಿನ ತಂತಿಗಳೆಲ್ಲವೂ ಒಂದೇ ಕೇಂದ್ರದೆಡೆಗೆ ಮುಖಮಾಡಿರುವುದಕ್ಕೆ ಹೋಲಿಸಬಹುದು. ಈಗ ನಾವು ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯವನ್ನೂ ಸಮಗ್ರವಾಗಿ ಸಮೀಕ್ಷಿಸೋಣ. ಆಮೂಲಕ ಪ್ರತಿಯೊಂದು ಅಧ್ಯಾಯವನ್ನೂ 'ಯೋಗ' ಎಂದು ಏಕೆ ಕರೆಯುತ್ತೇವೆ ಎನ್ನುವುದನ್ನು ನಾವು ಅರಿತುಕೊಳ್ಳಬಹುದು.

ಒಂದು ಮಾತಂತೂ ಸ್ಪಷ್ಟ. ಭಗವದ್ಗೀತೆಯ ವಿವಿಧ ಅಧ್ಯಾಯಗಳು ಬೇರೆ ಬೇರೆ ವಿಷಯಗಳನ್ನು ಬೋಧಿಸಿದರೂ, ಅವೆಲ್ಲವೂ ಭಗವದ್ಗೀತೆಯ ಸುಸಜ್ಜಿತವಾದ ಏಕಮಾತ್ರ ಸ್ವರೂಪದ ಅವಿಭಾಜ್ಯ ಅಂಗಗಳು. ಭಗವದ್ಗೀತೆಯು ಒಂದು ಮುಖ್ಯ ವಿಷಯವನ್ನು ಹೊಂದಿದೆ. ಪ್ರತಿಯೊಂದು ಅಧ್ಯಾಯವೂ ಇದನ್ನು ತನ್ನದೇ ಆದ ದೃಷ್ಟಿಕೋನದ ಮೂಲಕ ಈ ಕೇಂದ್ರ ವಿಷಯವನ್ನು ಪ್ರತಿನಿಧಿಸುತ್ತದೆ.

**೧ನೆಯ ಅಧ್ಯಾಯ : ಅರ್ಜುನ ವಿಷಾದ ಯೋಗ :** ಅರ್ಜುನನ ದುಃಖವು ಯೋಗವಾಗಬಲ್ಲುದೇ? ಇದನ್ನು ಅರಿಯುವುದಕ್ಕೆ ಶ್ರೀಶಂಕರಾಚಾರ್ಯರ ಮಾತುಗಳನ್ನು ಗಮನಿಸಬೇಕು. ಅವರು ಭಗವದ್ಗೀತೆಯ ಉದ್ದೇಶವಿರುವುದು ಜೀವಿಗಳು ಅನುಭವಿಸುವ ಶೋಕಮೋಹಗಳಿಂದ ಕೂಡಿರುವ ಸಂಸಾರಕ್ಕೆ ಕಾರಣವಾದ ಅವಿದ್ಯೆ, ಕಾಮ, ಕರ್ಮಗಳೆಂಬ ದೋಷಗಳಿಗೆ ಕಾರಣವನ್ನು ಎತ್ತಿತೋರಿಸುವುದು ಎನ್ನುತ್ತಾರೆ. ಹೀಗಾಗಿ ಅರ್ಜುನನ ಶೋಕ ಮತ್ತು ಮೋಹಗಳಿಗೆ ಶ್ರೀಕೃಷ್ಣನ ಉಪದೇಶವು ರಾಮಬಾಣವಾಗಿದೆ. ಆ ಮೂಲಕ ಮೋಕ್ಷಮಾರ್ಗವನ್ನು ಭಗವದ್ಗೀತೆಯು ತೋರಿಸಿಕೊಡುತ್ತದೆ. ಈ ಅರ್ಥದಲ್ಲಿ ಜೀವಿಯೊಬ್ಬನಲ್ಲಿ ಉಂಟಾಗುವ ಶೋಕ ಮತ್ತು ಮೋಹಗಳೇ ಸಾಧಕನೊಬ್ಬನನ್ನು ಮೋಕ್ಷಮಾರ್ಗಕ್ಕೆ ಪ್ರೇರೇಪಿಸುತ್ತವೆ. ಹೀಗಾಗಿ ಅರ್ಜುನನ ವಿಷಾದವೂ ಒಂದು ಯೋಗವೇ ಎಂದು ಹೇಳಬಹುದಲ್ಲವೆ?

**೨ನೆಯ ಅಧ್ಯಾಯ : ಸಾಂಖ್ಯಯೋಗ :** ಸಾಂಖ್ಯವೆಂದರೆ ಆತ್ಮಜ್ಞಾನ. ಇದನ್ನು ಶ್ರೀಶಂಕರಾಚಾರ್ಯರು 'ಪರಮಾರ್ಥವಸ್ತು ವಿವೇಕ' ಎಂದು ಬಣ್ಣಿಸುತ್ತಾರೆ. ಇದನ್ನು ಪಡೆದುಕೊಳ್ಳುವುದಕ್ಕೆ ಅನುಕೂಲಮಾಡಿಕೊಡುವ ಸಾಧನೆಯೇ ಸಾಂಖ್ಯಯೋಗ. ಇದಕ್ಕಾಗಿಯೇ ಈ ಅಧ್ಯಾಯದ ಮೊದಲಭಾಗದಲ್ಲಿ ಆತ್ಮದ ಲಕ್ಷಣಗಳನ್ನು ವಿವರವಾಗಿ ಭಗವಂತನು ಉಪದೇಶಿಸುತ್ತಾನೆ. ಇದಲ್ಲದೆ, ಈ ಜ್ಞಾನಕ್ಕೆ ಯೋಗ್ಯತೆಯನ್ನು ಪಡೆದುಕೊಳ್ಳಲು ಕರ್ಮಯೋಗವನ್ನು ಬೋಧಿಸುತ್ತಾನೆ. ಸಿದ್ಧಿ ಮತ್ತು ಅಸಿದ್ಧಿಗಳನ್ನು ಸಮನಾಗಿ ನೋಡುವುದೇ 'ಯೋಗ'. ಇಂಥ ಯೋಗಬುದ್ಧಿಯಿಂದ ಕರ್ಮಗಳಿಂದ ಬರುವ ಒಳ್ಳೆಯ ಫಲವನ್ನಾಗಲಿ, ಕೆಟ್ಟ ಫಲಗಳನ್ನಾಗಲಿ ತ್ಯಜಿಸಬೇಕು. ಆದರೆ ಕರ್ಮಗಳನ್ನು ಮಾತ್ರ ಬಿಡಬಾರದು. ಏಕೆಂದರೆ ಜೀವಿಗಳಾದ ನಮಗೆ ಕರ್ಮಮಾಡುವುದರಲ್ಲಿ ಮಾತ್ರ ಅಧಿಕಾರ; ಅದರ ಫಲದಲ್ಲಿ ಅಲ್ಲ. ಇದನ್ನೇ ಶ್ರೀಕೃಷ್ಣನು ಕರ್ಮ ಮಾಡುವ ಕೌಶಲ ಎನ್ನುತ್ತಾನೆ. ಅದನ್ನೇ 'ಯೋಗ' ಎಂದೂ ಬಣ್ಣಿಸುತ್ತಾನೆ. ಇದಲ್ಲದೆ. ಸಮತ್ವವೆಂಬ ಯೋಗದ ಚರಮಸೀಮೆಯನ್ನು ತಲುಪಿದ ಸಿದ್ಧನ ಲಕ್ಷಣಗಳನ್ನು ಕೂಡ ಬಣ್ಣಿಸುತ್ತಾನೆ. ಅವನನ್ನು ಸ್ಥಿತಪ್ರಜ್ಞ – ಸ್ಥಿರವಾದ ಬುದ್ಧಿಯುಳ್ಳವನು ಎಂದು ಬಣ್ಣಿಸುತ್ತಾನೆ.

**೩ನೆಯ ಅಧ್ಯಾಯ : ಕರ್ಮಯೋಗ :** ಕರ್ಮಯೋಗದ ಆದರ್ಶವನ್ನು ಎರಡನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಸ್ಪಷ್ಟಪಡಿಸಿದನು. ಇನ್ನು ಅದರ ಆಚರಣಾವಿಧಾನವನ್ನು ಮೂರನೆಯ ಅಧ್ಯಾಯದಲ್ಲಿ ಅವನು ನಮಗೆ ಹೇಳಿಕೊಡುತ್ತಾನೆ. ಕರ್ಮದ ಗುರಿ ಜ್ಞಾನದ ಸ್ಥಿತಿ. ಅದು ನೈಷ್ಕರ್ಮ್ಯದ ಸ್ಥಿತಿ. ಇದನ್ನು ಕರ್ಮಯೋಗದ ಸಾಧನೆಯಿಂದ ಮಾತ್ರವೇ ಗಳಿಸಿಕೊಳ್ಳಬಹುದು. ಕರ್ಮವು ಮನುಷ್ಯ ಸಹಜವಾದ ಪ್ರಕೃತಿಧರ್ಮ. ಕರ್ಮ ಮಾಡದೆಯೇ ಒಂದು ಕ್ಷಣವೂ ಇರುವುದಕ್ಕೆ ಆಗುವುದಿಲ್ಲ. ಹಾಗಾದರೆ ಮಾರ್ಗವೇನು? ಇದನ್ನು ಈ ಅಧ್ಯಾಯದ ೬ಮತ್ತು ೭ನೆಯ ಶ್ಲೋಕಗಳಲ್ಲಿ ಕೃಷ್ಣನು ಸ್ಪಷ್ಟಪಡಿಸುತ್ತಾನೆ: ''ಕರ್ಮೇಂದ್ರಿಯಗಳನ್ನು ನಿಯಂತ್ರಿಸಿಕೊಳ್ಳಬೇಕು. ಹೀಗೆ ತನ್ನ ಮನಸ್ಸಿನಿಂದ ಇಂದ್ರಿಯಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡು, ಕರ್ಮೇಂದ್ರಿಯಗಳ ಮೂಲಕ ಯಾರು ಕರ್ಮಯೋಗವನ್ನು ನಿರಾಸಕ್ತಭಾವನೆಯಿಂದ ಅನುಷ್ಠಾನ ಮಾಡುತ್ತಾನೆಯೋ, ಅವನೇ ಶ್ರೇಷ್ಠ ವ್ಯಕ್ತಿ.'' ಕರ್ಮಯೋಗವೆಂದರೇನು? ಯಜ್ಞಭಾವನೆಯಿಂದ, ಸಮರ್ಪಣಾಭಾವದಿಂದ, ತ್ಯಾಗಬುದ್ಧಿಯಿಂದ, ಎಲ್ಲ ಕರ್ಮಗಳನ್ನೂ, ಅವುಗಳ ಫಲವನ್ನೂ ಭಗವಂತನಿಗೆ ಅರ್ಪಿಸುವುದು. ಹೀಗೆ ಮಾಡಿದರೆ ಕರ್ಮಗಳು ನಮ್ಮನ್ನು ಸಂಸಾರ ಬಂಧನದಿಂದ ಬಿಡಿಸುತ್ತವೆ; ಇಲ್ಲವೇ ಬಂಧನಕ್ಕೆ ಉಂಟುಮಾಡುತ್ತವೆ. ಇದಕ್ಕಾಗಿ ಬೇಕಾದುದು ನಿರಾಸಕ್ತಭಾವನೆ.

**೪ನೆಯ ಅಧ್ಯಾಯ: ಜ್ಞಾನಯೋಗ:** ಸತತವಾದ ಕರ್ಮಯೋಗ ಅನುಷ್ಠಾನವು ಜ್ಞಾನಯೋಗಕ್ಕೆ ಅರ್ಹತೆಯನ್ನು ನೀಡುತ್ತದೆ. ಕರ್ಮ ಮಾಡುತ್ತಿದ್ದರೂ, ಮನಸ್ಸಿನಲ್ಲಿ ನಿರ್ವಿಕಾರ ಭಾವನೆಯನ್ನು ಬೆಳೆಸಿಕೊಂಡಿರುವುದು ಜ್ಞಾನಿಯ ಲಕ್ಷಣ. ಹಾಗೆಯೇ ಕರ್ಮ ಮಾಡದೆ ಇದ್ದರೂ, ಮನಸ್ಸು-ಬುದ್ಧಿಗಳಲ್ಲಿ ಪ್ರಕೃತಿ ಸಹಜವಾದ ಕರ್ಮ ನಡೆದೇ ಇರುತ್ತದೆ. ಇಂಥ ಜ್ಞಾನವನ್ನು ಜ್ಞಾನಿಯು ಹೊಂದಿರುತ್ತಾನೆ. ಇಂಥ ಜ್ಞಾನವು ಎಲ್ಲ ಕರ್ಮಸಂಸ್ಕಾರಗಳನ್ನು ದಹಿಸಿಬಿಡುತ್ತದೆ. ಜ್ಞಾನಿಯು ಯಾವುದು ತಾನೇತಾನಾಗಿ ದೊರಕಿಬರುವುದೋ, ಅದರಲ್ಲಿ ತೃಪ್ತನಾಗಿರುತ್ತಾನೆ. ಕೇವಲ ಶರೀರ ನಿರ್ವಹಣೆಗೆ ಮಾತ್ರವೇ ಕರ್ಮ ಮಾಡುತ್ತಾನೆ. ಅವನು ಮಾಡುವ ಕರ್ಮ ಬ್ರಹ್ಮಕರ್ಮ. ಇಂಥ ಕರ್ಮದಲ್ಲಿ ಎಲ್ಲವೂ ಬ್ರಹ್ಮಮಯವಾಗಿ ಅವನಿಗೆ ತೋರುತ್ತದೆ.

**೫ನೆಯ ಅಧ್ಯಾಯ: ಸಂನ್ಯಾಸ ಯೋಗ:** ಜ್ಞಾನಿಯ ಮುಖ್ಯವಾದ ಲಕ್ಷಣವೆಂದರೆ ಸಂನ್ಯಾಸ, ಅಂದರೆ ರಾಗದ್ವೇಷಗಳು ಇಲ್ಲದೆ ಇರುವುದು; ಬಾಹ್ಯವಾಗಿ, ಅಂತರಂಗಿಕವಾಗಿ ಭೋಗಗಳನ್ನು ತ್ಯಾಗಮಾಡುವುದು. ಈ ಸ್ಥಿತಿಯು ಕರ್ಮಯೋಗದ ತರಬೇತಿಯಿಲ್ಲದೆ ಸಾಮಾನ್ಯಜನರಿಗೆ ಒದಗಿಬರುವುದಿಲ್ಲ. ಸಾಧಕನು ಮಾಡುವ ಕರ್ಮಗಳೆಲ್ಲ ಬ್ರಹ್ಮಸ್ಥಿತಿಯಲ್ಲಿಯೇ ಸುಸಂಪನ್ನವಾಗುತ್ತವೆ. ಇಂಥ ಸ್ಥಿತಿಯನ್ನು ಪಡೆದುಕೊಂಡ ಜ್ಞಾನಿಯು ಕಮಲಪತ್ರದ ಹಾಗೆ ಯಾವುದಕ್ಕೂ ಅಂಟಿಕೊಳ್ಳದೆ ಇರುತ್ತಾನೆ; ಹೀಗಾಗಿ ಪಾಪಗಳ ಸೋಂಕು ಅವನಿಗೆ ತಟ್ಟುವುದಿಲ್ಲ. ಕರ್ಮಗಳನ್ನು ಮನಸ್ಸಿನಲ್ಲಿ ತ್ಯಾಗಮಾಡಿದ ಜ್ಞಾನಿಯು ಪರಮಸುಖ

ವನ್ನು ಪಡೆದುಕೊಳ್ಳುತ್ತಾನೆ. ಅವನು ತನ್ನ ಅಂತರಂಗದಲ್ಲಿಯೇ ಪರಮಜ್ಯೋತಿಯ ದರ್ಶನವನ್ನು ಪಡೆದುಕೊಂಡು, ಬ್ರಹ್ಮ ನಿರ್ವಾಣವೆಂಬ ಪರಮಸ್ಥಿತಿಯನ್ನು ಪಡೆದುಕೊಳ್ಳುತ್ತಾನೆ.

**೬ನೆಯ ಅಧ್ಯಾಯ : ಧ್ಯಾನಯೋಗ :** ಶ್ರೀಶಂಕರಾಚಾರ್ಯರ ಪ್ರಕಾರ ಜ್ಞಾನಯೋಗವೆಂಬ ಸಿದ್ಧಿಗೆ ಕರ್ಮಯೋಗವು ಬಾಹ್ಯ ಸಾಧನೆ; ಧ್ಯಾನಯೋಗವು ಆಂತರಂಗಿಕ ಸಾಧನೆ. ಹೀಗಾಗಿ, ಸಾಧಕನು ಈ ಧ್ಯಾನಯೋಗದಲ್ಲಿ ಪರಿಣತಿಯನ್ನು ಪಡೆಯಲಿ ಎಂಬ ಉದ್ದೇಶದಿಂದ ಶ್ರೀಕೃಷ್ಣನು ಈ ಅಧ್ಯಾಯವನ್ನು ಆರಂಭಿಸುತ್ತಾನೆ. ಯೋಗಿಯಾದವನು ಜ್ಞಾನ ಮತ್ತು ಅನುಭವಗಳಿಂದ ತೃಪ್ತನಾಗಿರುವವನು; ಇಂದ್ರಿಯಗಳನ್ನು ಜಯಿಸಿರುವವನು; ಕಲ್ಲು ಮತ್ತು ಕಾಂಚನಗಳನ್ನು ಸಮನಾಗಿ ಕಾಣುವವನು. ಅವನು ಯಾವತ್ತೂ ರಹಸ್ಯವಾದ ಸ್ಥಳದಲ್ಲಿ ಏಕಾಕಿಯಾಗಿ, ಮನಸ್ಸನ್ನು ನಿಯಂತ್ರಿಸಿಕೊಂಡು, ಆಸೆಗಳೆಲ್ಲವನ್ನೂ ತ್ಯಜಿಸಿ, ಯಾವ ಸಂಗ್ರಹವನ್ನು ಮಾಡದೆ ಧ್ಯಾನಾಭ್ಯಾಸವನ್ನು ಮಾಡಬೇಕು. ಅಂಥವನು ಅತ್ಯಂತ ಉನ್ನತವಾದ ಶಾಂತಿಯನ್ನು ಪಡೆದುಕೊಳ್ಳುತ್ತಾನೆ. ಇದಲ್ಲದೆ ಶ್ರೀಕೃಷ್ಣನು ಧ್ಯಾನದ ವಿಧಾನವನ್ನು ಕೂಡ ವಿವರಿಸಿ ಹೇಳುತ್ತಾನೆ. ಅವನು ನೀಡುವ ಒಂದು ಉದಾಹರಣೆ ಪ್ರಸಿದ್ಧವಾದುದು. ಗಾಳಿ ಇಲ್ಲದ ನಿವಾತ ಸ್ಥಳದಲ್ಲಿ ದೀಪವು ಸ್ವಲ್ಪವೂ ಅಲುಗಾಡದೆ ಉರಿಯುತ್ತದೆ. ಹಾಗೆಯೇ ಪರಿಪೂರ್ಣ ಧ್ಯಾನಸ್ಥಿತಿಯಲ್ಲಿ ಯೋಗಿಯ ಮನಸ್ಸು ಕೂಡ ಸ್ಥಿರವಾಗಿ ನಿಲ್ಲುತ್ತದೆ.

**೭ನೆಯ ಅಧ್ಯಾಯ : ಜ್ಞಾನವಿಜ್ಞಾನಯೋಗ :** ಹಿಂದಿನ ಅಧ್ಯಾಯದಲ್ಲಿ ಧ್ಯಾನದ ವಿಧಾನವನ್ನು ಶ್ರೀಕೃಷ್ಣನು ಉಪದೇಶಿಸುತ್ತಾನೆ. ಈಗ ಧ್ಯೇಯವಸ್ತುವು ಯಾವುದು ಎಂದು ಈ ಅಧ್ಯಾಯದಲ್ಲಿ ತಿಳಿಸಿಕೊಡುತ್ತಾನೆ. ಯೋಗಿಗಳಲ್ಲಿ ಉತ್ತಮನಾದವನು ವಾಸುದೇವನಾದ ನನ್ನಲ್ಲಿ ಶ್ರದ್ಧೆಯಿಂದ ಮನಸ್ಸನ್ನು ಏಕಾಗ್ರಗೊಳಿಸುತ್ತಾನೆ ಎನ್ನುತ್ತಾನೆ. ಈ ಅಧ್ಯಾಯದಲ್ಲಿ ಜ್ಞಾನ ಎಂದರೆ ಭಗವಂತನ ವಿಷಯವಾದ ಜ್ಞಾನ; ವಿಜ್ಞಾನ ಎಂದರೆ ಅನುಭವದಿಂದ ಕೂಡಿದ ಜ್ಞಾನ. ಇದನ್ನು ಬೋಧಿಸುವುದೇ ಈ ಅಧ್ಯಾಯದ ಉದ್ದೇಶ. ಇದಕ್ಕಾಗಿ ಇಡೀ ವಿಶ್ವವೇ ಭಗವಂತನ ಪ್ರಕೃತಿ ಅಥವಾ ಶಕ್ತಿ ಎಂದು ಶ್ರೀಕೃಷ್ಣನು ತಿಳಿಸಿಕೊಡುತ್ತಾನೆ. ಜೀವಿಗಳೆಲ್ಲರೂ ಆತನ ಪರಾ ಪ್ರಕೃತಿ. ಭೂಮಿ, ನೀರು, ಬೆಂಕಿ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ ಇವುಗಳಿಂದ ಕೂಡಿದ ಜಡಪ್ರಕೃತಿಯು ಪರಮಾತ್ಮನ ಅಪರಾಪ್ರಕೃತಿ. ಭಗವಂತನು ಇಡೀ ಜಗತ್ತಿನ ಹುಟ್ಟು, ಸ್ಥಿತಿ ಮತ್ತು ಪ್ರಲಯಗಳಿಗೆ ಕಾರಣನಾಗಿದ್ದಾನೆ; ಇಡೀ ಜಗತ್ತಿನ ಸಾರಭೂತನಾಗಿದ್ದಾನೆ. ಇದು ಈ ಅಧ್ಯಾಯದ ತಿರುಳು.

**೮ನೆಯ ಅಧ್ಯಾಯ : ಅಭ್ಯಾಸಯೋಗ :** ಕರ್ಮಯೋಗ ಮತ್ತು ಧ್ಯಾನಯೋಗಗಳನ್ನು ಸತತವಾಗಿ ಆಭ್ಯಾಸ ಮಾಡಬೇಕು. ಇದರ ಮಹತ್ವವನ್ನು ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ತಿಳಿಸಿಕೊಡುತ್ತಾನೆ. ಯಾವುದನ್ನು ಸ್ಮರಿಸುತ್ತ, ಒಬ್ಬನು ಮರಣ ಹೊಂದುತ್ತಾನೆಯೋ, ಆ ಭಾವವನ್ನೇ ಪಡೆದುಕೊಂಡು, ಮುಂದಿನ ಜನ್ಮವನ್ನು ಹೊಂದುತ್ತಾನೆ. ಒಬ್ಬ ಸಾಧಕನು ತನ್ನ ಅಂತ್ಯಕಾಲದಲ್ಲಿ ಭಗವಂತನನ್ನೇ ಸ್ಮರಿಸಬೇಕು. ಆಗ ಅವನು ಭಗವದ್ಭಾವವನ್ನೇ ಪಡೆಯುತ್ತಾನೆ. ಆದರೆ ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆ ಮಾಡುವ ಶಕ್ತಿ ಅಥವಾ ಅರ್ಹತೆಯನ್ನು ಪಡೆದುಕೊಳ್ಳಬೇಕು; ಅದಕ್ಕಾಗಿ ಎಲ್ಲ ಕಾಲದಲ್ಲಿಯೂ ಪರಮಾತ್ಮನನ್ನು ಸ್ಮರಿಸಬೇಕು. ಭಗವಂತನನ್ನು ಸ್ಮರಣೆಮಾಡುತ್ತಲೇ, ನಮ್ಮ ಕರ್ತವ್ಯಗಳನ್ನೂ ಮಾಡುತ್ತ ಹೋಗಬೇಕು : **ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ;** 'ಆದ್ದರಿಂದ ಎಲ್ಲ ಕಾಲದಲ್ಲಿಯೂ ನನ್ನನ್ನೇ ಸ್ಮರಿಸುತ್ತಿರು ಮತ್ತು ಯುದ್ಧವನ್ನೂ ಮಾಡು.' ಇದೇ ಅಭ್ಯಾಸಯೋಗ. ಇಂಥ ಅಭ್ಯಾಸಯೋಗದಿಂದ, ಮನಸ್ಸನ್ನು ಬೇರೆ ಎಲ್ಲಿಗೂ ಹೋಗಲು ಬಿಡದೆ, ಭಗವಂತನನ್ನು ಚಿಂತಿಸುತ್ತ ಇರುವ ಯೋಗಿಯು, ದಿವ್ಯ ಪರಮಪುರುಷನನ್ನು ಹೊಂದುತ್ತಾನೆ. ಹೀಗೆ ಪರಮಾತ್ಮನನ್ನು ಪಡೆದ ಮೇಲೆ, ದುಃಖಮಯವೂ ಅಶಾಶ್ವತವೂ ಆದ ಪುನರ್ಜನ್ಮವನ್ನು ಅಂತಹ ಮಹಾತ್ಮನು ಮತ್ತೆ ಪಡೆಯುವುದಿಲ್ಲ. ಇಲ್ಲಿ ಶ್ರೀಕೃಷ್ಣನು ಸ್ಪಷ್ಟವಾದ ಆದೇಶವನ್ನು ಕೊಡುತ್ತಾನೆ: '**ತಸ್ಮಾತ್ ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ**' – 'ಆದ್ದರಿಂದ, ಎಲ್ಲ ಕಾಲದಲ್ಲಿಯೂ, ಯೋಗಯುಕ್ತನಾಗಿರು.'

**೯ನೆಯ ಅಧ್ಯಾಯ: ರಾಜವಿದ್ಯಾರಾಜಗುಹ್ಯಯೋಗ:** ಬ್ರಹ್ಮವಿದ್ಯೆಯು ಎಲ್ಲ ವಿದ್ಯೆಗಳಿಗೂ ರಾಜನಂತೆ ಇರುವ ವಿದ್ಯೆ. ಹಾಗೆಯೇ ಇದು ರಹಸ್ಯವಾದುದು ಕೂಡ. ಈ ಎಲ್ಲ ಸೃಷ್ಟಿಯನ್ನೂ ಭಗವಂತನೇ ವ್ಯಾಪಿಸಿದ್ದಾನೆ. ಈ ಅಧ್ಯಾಯದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ: ''ಈ ಎಲ್ಲ ಜೀವರಾಶಿಗಳೂ ನನ್ನಲ್ಲಿಯೇ ಅಂತರ್ಗತವಾಗಿವೆ. ಆದರೆ ನಾನು ಈ ಜಗತ್ತಿಗಾಗಲಿ ಅಥವಾ ಜೀವಿಗಳ ಮಟ್ಟಿಗಾಗಲಿ ಸೀಮಿತನಾಗಿಲ್ಲ. ಮನುಷ್ಯದೇಹದಲ್ಲಿ ಅಂತರ್ಯಾಮಿ ರೂಪದಲ್ಲಿರುವ ಮಹೇಶ್ವರನಾದ ನನ್ನ ನಿಜರೂಪವನ್ನು ಸಾಧಾರಣ ಜನರು ಅರಿಯರು. ಆದರೆ ಜ್ಞಾನಿಗಳಾದ ಮಹಾತ್ಮರು ನನ್ನ ಅವ್ಯಯಸ್ವರೂಪವನ್ನು ತಿಳಿದುಕೊಂಡು, ನನ್ನಲ್ಲಿಯೇ ಮನಸ್ಸನ್ನು ಇಟ್ಟು ನನ್ನನ್ನು ಭಜಿಸುತ್ತಾರೆ. ಅವರು ಯಾವತ್ತೂ ನನ್ನ ಕೀರ್ತನೆಯನ್ನು ಮಾಡುತ್ತಾರೆ; ದೃಢವ್ರತರಾಗಿರುತ್ತಾರೆ; ಮನಸ್ಸನ್ನು ನಿಗ್ರಹಿಸಿಕೊಂಡು, ಭಕ್ತಿಯಿಂದ ನನ್ನನ್ನು ನಮಸ್ಕರಿಸುತ್ತ ಉಪಾಸನೆ ಮಾಡುತ್ತಾರೆ. ಅಂಥ ಭಕ್ತರ ಯೋಗಕ್ಷೇಮವನ್ನು ನಾನೇ ವಹಿಸಿಕೊಳ್ಳುತ್ತೇನೆ.''

**೧೦ನೆಯ ಅಧ್ಯಾಯ : ವಿಭೂತಿಯೋಗ :** ಭಗವಂತನನ್ನು ಅವನ ವಿಭೂತಿಗಳ ಮೂಲಕ ಧ್ಯಾನಮಾಡಬಹುದು; ಚಿಂತನೆ ಮಾಡಬಹುದು. ಅದು ಸಾಧನೆಯನ್ನು ಸುಲಭಗೊಳಿಸುತ್ತದೆ. ವಿಭೂತಿಯೆಂದರೆ ಈ ಜಗತ್ತಿನಲ್ಲಿ ಭಗವಂತನ ಅಭಿವ್ಯಕ್ತಿ, ಆವಿರ್ಭಾವ. ಎಲ್ಲೆಲ್ಲಿ ಉತ್ಕೃಷ್ಟತೆ, ತೇಜಸ್ಸು ಇರುವುದೋ ಅಲ್ಲೆಲ್ಲ

ನನ್ನ ಅಂಶ ಇರುತ್ತದೆ ಎಂದು ಶ್ರೀಕೃಷ್ಣನು ಹೇಳುತ್ತಾನೆ. ಅಂತಹ ಹಲವಾರು ವಿಭೂತಿಗಳನ್ನು ವಿವರಿಸುತ್ತಾನೆ. ಕಡೆಯಲ್ಲಿ ಅವನೇ ಹೇಳುತ್ತಾನೆ: ''ಅರ್ಜುನ, ನನ್ನ ದಿವ್ಯವಾದ ವಿಭೂತಿಗಳಿಗೆ ಅಂತ್ಯವೇ ಇಲ್ಲ. ಒಂದು ಅಂಶದಿಂದ ಇಡೀ ಜಗತ್ತನ್ನೇ ನಾನು ಧರಿಸಿಕೊಂಡಿದ್ದೇನೆ.'' ಇಲ್ಲಿ ವಿಭೂತಿಗಳನ್ನು ಹೇಳಿರುವುದು ಭಕ್ತರು ಅವುಗಳ ಧ್ಯಾನ ಮಾಡಲಿ ಎಂದು; ಉಪಾಸನೆ ಮಾಡಲಿ ಎಂದು.

**೧೧ನೆಯ ಅಧ್ಯಾಯ : ವಿಶ್ವರೂಪದರ್ಶನಯೋಗ :** ಈ ಸಮಸ್ತ ಸೃಷ್ಟಿಯೇ ಭಗವಂತನ ವಿಶೇಷ ವಿಭೂತಿಯೆಂದು ಹೇಳಬಹುದು. ಈ ಜಗದಾತ್ಮರೂಪವನ್ನು ನೋಡಬೇಕೆಂದು ಅರ್ಜುನನು ಇಚ್ಛಿಸುತ್ತಾನೆ. ಅದಕ್ಕಾಗಿ ಭಗವಂತನು ಅವನಿಗೆ ದಿವ್ಯಚಕ್ಷುಸ್ಸನ್ನು ಪ್ರದಾನ ಮಾಡುತ್ತಾನೆ. ಎಲ್ಲವನ್ನೂ ಒಳಗೊಂಡ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಅನನ್ಯವಾದ ಭಕ್ತಿಯಿಂದ ಮಾತ್ರವೇ ಈ ಅದ್ಭುತ ರೂಪವನ್ನು ನೋಡಬಹುದು. ಈ ಅಧ್ಯಾಯದ ಕೊನೆಯ ಶ್ಲೋಕವು ಭಗವದ್ಗೀತೆಯ ಸಾರಸಂಗ್ರಹ ರೂಪವಾಗಿದೆ ಎಂದು ಶ್ರೀ ಶಂಕರಾಚಾರ್ಯರು ಅಭಿಪ್ರಾಯ ಪಡುತ್ತಾರೆ. ಅದರಲ್ಲಿ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ: ''ಎಲೈ ಪಾಂಡುಪುತ್ರನೇ! ಯಾರು ನನಗಾಗಿಯೇ ಕರ್ಮಗಳನ್ನು ಮಾಡುವನೋ, ನನ್ನನ್ನೇ ಪರಮಗುರಿಯಾಗಿ ಹೊಂದಿರುವನೋ, ನನ್ನ ಭಕ್ತನೋ, ಸಂಗ (ಆಸಕ್ತಿಯನ್ನು) ತೊರೆದಿರುವನೋ, ಮತ್ತು ಎಲ್ಲ ಜೀವಿಗಳಲ್ಲಿ ಹಗೆತನವಿಲ್ಲದಿರುವನೋ, ಅವನು ನನ್ನನ್ನೇ ಸೇರುತ್ತಾನೆ.''

**೧೨ನೆಯ ಅಧ್ಯಾಯ : ಭಕ್ತಿಯೋಗ :** ವಿಭೂತಿಯೋಗ ಮತ್ತು ವಿಶ್ವರೂಪದರ್ಶನಗಳಲ್ಲಿ ವಿವರಿಸಿದ ಭಗವಂತನ ಸಾರ್ವತ್ರಿಕ ವಿಭೂತಿರೂಪಗಳನ್ನು ಸಾಧಕನು ಧ್ಯಾನಮಾಡಬೇಕು, ಉಪಾಸನೆ ಮಾಡಬೇಕು. ಉಪಾಸನೆಗೆ ಅತ್ಯಂತ ಆವಶ್ಯಕವಾಗಿ ಬೇಕಾದುದು ಭಗವಂತನಲ್ಲಿ ಪ್ರೇಮ, ಭಕ್ತಿ. ಹಾಗೆಂದೇ ಶ್ರೀಕೃಷ್ಣನು ಹೇಳುತ್ತಾನೆ (೧೨:೨): ''ಯಾರು ನನ್ನಲ್ಲಿಯೇ ಮನಸ್ಸನ್ನು ಇಟ್ಟು, ಸಮಾಧಾನಚಿತ್ತರಾಗಿ, ಪರಮ ಶ್ರದ್ಧೆಯಿಂದ ನನ್ನನ್ನು ಉಪಾಸನೆ ಮಾಡುವರೋ, ಅವರು ಉತ್ತಮರಾದವರು ಎಂದು ನನ್ನ ಅಭಿಪ್ರಾಯ.'' ಇದಕ್ಕಾಗಿ ಶ್ರೀಕೃಷ್ಣ ಬೋಧಿಸುವ ಭಕ್ತಿಯೋಗದ ಬೋಧನೆ ಇದು (೧೨:೮) : ''ನನ್ನಲ್ಲಿಯೇ ಮನಸ್ಸನ್ನು ಇಡು, ನನ್ನಲ್ಲಿಯೇ ಬುದ್ಧಿಯು ಪ್ರವೇಶಿಸುವಂತೆ ಮಾಡಿಕೋ. ಆ ಬಳಿಕ ನನ್ನಲ್ಲಿಯೇ ನಿವಾಸ ಮಾಡುತ್ತೀಯೆ. ಇದರಲ್ಲಿ ಸಂಶಯವೇ ಇಲ್ಲ.'' ಚಿತ್ತವನ್ನು ಶಾಂತವಾಗಿ ಇಡಲು ಸಾಧ್ಯವಾಗದಿದ್ದರೆ ಅಭ್ಯಾಸ ಮಾಡಬೇಕು. ಅಭ್ಯಾಸವನ್ನೂ ಮಾಡಲು ಸಾಧ್ಯವಾಗದಿದ್ದರೆ, ಭಗವಂತನೇ ಗುರಿಯಾಗಿ, ಉದ್ದೇಶ್ಯವಾಗಿ ಉಳ್ಳ ಕರ್ಮಗಳನ್ನು ಮಾಡಬೇಕು. ಅದೂ ಸಾಧ್ಯವಾಗದಿದ್ದರೆ, ಭಗವಂತನನ್ನೇ ಆಶ್ರಯಿಸಿಕೊಂಡು, ಅವನಿಗೆ ಎಲ್ಲ ಕರ್ಮಗಳ ಫಲವನ್ನು ಸಮರ್ಪಿಸಿಬಿಡಬೇಕು. ಇದೇ ಭಕ್ತಿಯೋಗದ ಸಾರ.



ಇದಲ್ಲದೆ, ಭಕ್ತರ ಲಕ್ಷಣಗಳನ್ನು ಕೂಡ ಶ್ರೀಕೃಷ್ಣನು ಈ ಅಧ್ಯಾಯದಲ್ಲಿ ವಿವರವಾಗಿ ಹೇಳುತ್ತಾನೆ.

**೧೩ನೆಯ ಅಧ್ಯಾಯ : ಕ್ಷೇತ್ರಕ್ಷೇತ್ರಜ್ಞಯೋಗ :** ಏಳನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ತನ್ನ ಈಶ್ವರೀಶಕ್ತಿಯನ್ನು ಪರಾಪ್ರಕೃತಿ ಮತ್ತು ಅಪರಾಪ್ರಕೃತಿ ಎಂದು ವಿಂಗಡಿಸಿ ಹೇಳಿದ್ದನು. ಈ ವಿಚಾರವನ್ನೇ ಈ ಅಧ್ಯಾಯದಲ್ಲಿ ವಿಸ್ತರಿಸಿ ಹೇಳುತ್ತಾನೆ. ಪ್ರತಿಯೊಂದು ದೇಹದಲ್ಲಿರುವ, ಚೈತನ್ಯರೂಪವಾದ ಆತ್ಮವನ್ನು **ಕ್ಷೇತ್ರಜ್ಞ** ಎಂದು ಹೆಸರಿಸುತ್ತಾನೆ; ದೇಹ, ಮನಸ್ಸು ಬುದ್ಧಿಗಳನ್ನು **ಕ್ಷೇತ್ರ** ಎಂದು ಕರೆಯುತ್ತಾನೆ. ಮುಂದುವರೆದು, ಪ್ರತಿಯೊಂದು ದೇಹದಲ್ಲಿರುವ ಕ್ಷೇತ್ರಜ್ಞನು ಭಗವಂತನಾದ ನಾನೇ ಆಗಿದ್ದೇನೆ ಎಂದು ಘೋಷಿಸುತ್ತಾನೆ. ಹೀಗಾಗಿ ಪ್ರತಿಯೊಬ್ಬ ಜೀವಿಯೂ ದಿವ್ಯಾತ್ಮ ಅಥವಾ ಪರಮಾತ್ಮನೇ ಆಗಿದ್ದಾನೆ ಎಂದು ಸೂಚಿಸುತ್ತಾನೆ. ಕ್ಷೇತ್ರ ಮತ್ತು ಕ್ಷೇತ್ರಜ್ಞರ ಈ ವಿಭಾಗವನ್ನು ತಿಳಿದುಕೊಂಡವನೇ ನಿಜವಾದ ಜ್ಞಾನಿ. ಹೀಗೆ ಹೇಳಿ, ಶ್ರೀಕೃಷ್ಣನು ಜ್ಞಾನಿಯ ಗುಣಗಳನ್ನು ಎತ್ತಿ ಹೊಗಳುತ್ತಾನೆ. ಎಲ್ಲ ಜೀವರಾಶಿಗಳಲ್ಲಿಯೂ ಒಂದೇ ತತ್ತ್ವವಾದ ಪರಮೇಶ್ವರನು ಇದ್ದಾನೆ. ವಿನಾಶವುಳ್ಳ ದೇಹಾದಿಗಳ ಮಧ್ಯೆ ಇರುವ ಅವಿನಾಶಿಯಾದ ಅವನನ್ನು ನೋಡುವವನೇ, ನಿಜವಾದ ಜ್ಞಾನಿ. ಸೂರ್ಯನು ಇಡೀ ಜಗತ್ತನ್ನು ಬೆಳಗುವಂತೆ, ದೇಹಾದಿಗಳನ್ನು (ಕ್ಷೇತ್ರ), ಆತ್ಮಚೈತನ್ಯವು (ಕ್ಷೇತ್ರಿ) ಬೆಳಗುತ್ತದೆ. ಇದು ಈ ಅಧ್ಯಾಯವು ಹೇಳುವ ವಿಷಯ.

**೧೪ನೆಯ ಅಧ್ಯಾಯ : ಗುಣತ್ರಯವಿಭಾಗಯೋಗ :** ಜಗತ್ತೆಲ್ಲವೂ ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಪ್ರಕೃತಿಯ ಗುಣಗಳಿಂದ ಕೂಡಿದೆ. ಇವು ಜೀವಿಯನ್ನು ದೇಹವೆಂಬ ಬಂಧನದಲ್ಲಿ ಇಡುತ್ತವೆ. ಇದೇ ಸಂಸಾರಕ್ಕೆ ಕಾರಣ. ಆದ್ದರಿಂದ ಸಾಧಕನು ಈ ಗುಣಗಳನ್ನು ಮೀರಿನಿಲ್ಲಬೇಕು; ತ್ರಿಗುಣಾತೀತನಾಗಬೇಕು. ಅಂಥವನು ಜನ್ಮ, ಮೃತ್ಯು, ವೃದ್ಧಾಪ್ಯ ಮತ್ತು ವ್ಯಾಧಿಗಳಿಂದ ಬಿಡುಗಡೆಯನ್ನು ಪಡೆಯುತ್ತಾನೆ. ಇದು ಭಗವಂತನಲ್ಲಿ ಮಾಡುವ ಏಕನಿಷ್ಠೆಯ ಭಕ್ತಿಯಿಂದ ಮಾತ್ರ ಸಾಧ್ಯ. ಈ ಬೋಧನೆ ಈ ಅಧ್ಯಾಯದಲ್ಲಿ ಬರುತ್ತದೆ.

**೧೫ನೆಯ ಅಧ್ಯಾಯ : ಪುರುಷೋತ್ತಮಯೋಗ :** ಈ ಅಧ್ಯಾಯದ ಪ್ರಾರಂಭದಲ್ಲಿ ಶ್ರೀಕೃಷ್ಣನು ಸಂಸಾರವನ್ನು ಒಂದು ವೃಕ್ಷಕ್ಕೆ ಹೋಲಿಸಿ ವಿವರಿಸುತ್ತಾನೆ. ಇದರ ಉದ್ದೇಶ ಸಾಧಕರಲ್ಲಿ ವೈರಾಗ್ಯ ಉಂಟಾಗಲಿ ಎಂದು. ಏಕೆಂದರೆ ವಿರಕ್ತನಾದವನಿಗೆ ಮಾತ್ರವೇ ತತ್ತ್ವಜ್ಞಾನಕ್ಕೆ ಅರ್ಹತೆ ಬರುತ್ತದೆ. ಅಂಥ ವಿರಕ್ತರು ಮೋಹವನ್ನು ಬಿಟ್ಟು, ಸಂಗದಿಂದ ಉಂಟಾದ ದೋಷಗಳನ್ನು ಗೆಲ್ಲುತ್ತಾರೆ. ಸುಖದುಃಖಗಳೆಂಬ ದ್ವಂದ್ವಗಳಿಂದ ಮುಕ್ತರಾಗಿ, ಅವ್ಯಯವಾದ ಸ್ಥಿತಿಯನ್ನು ಪಡೆದುಕೊಳ್ಳುತ್ತಾರೆ. ಇದು ಪರಮಾತ್ಮನ ಧಾಮ. ಇಲ್ಲಿ ಸೂರ್ಯನು ಬೆಳಗುವುದಿಲ್ಲ; ಚಂದ್ರನಾಗಲಿ, ಅಗ್ನಿಯಾಗಲಿ ಬೆಳಗುವುದಿಲ್ಲ. ಈ ಪರಮಸ್ಥಿತಿಯನ್ನು ಪಡೆದವರು ಮತ್ತೆ ಸಂಸಾರಕ್ಕೆ ತಿರುಗಿಬರುವ ಭಯವಿಲ್ಲ.

**೧೬ನೆಯ ಅಧ್ಯಾಯ : ದೈವಾಸುರ ಸಂಪದ್ವಿಭಾಗ ಯೋಗ :** ಈ ಅಧ್ಯಾಯದಲ್ಲಿ ದೈವೀಗುಣಗಳಾದ ಅಭಯ, ಚಿತ್ತಶುದ್ಧಿ ಮುಂತಾದವುಗಳನ್ನು ಕೃಷ್ಣನು ಬಣ್ಣಿಸುತ್ತಾನೆ. ಹಾಗೆಯೇ ದರ್ಪ, ದಂಭ ಮುಂತಾದ ಆಸುರೀಗುಣಗಳನ್ನು ಕೂಡ ವಿವರಿಸುತ್ತಾನೆ. ಸಂಸಾರದಿಂದ ಮೋಕ್ಷವನ್ನು ಗಳಿಸಿಕೊಳ್ಳುವುದಕ್ಕಾಗಿ ದೈವೀಗುಣಗಳನ್ನು ಬೆಳೆಸಿಕೊಳ್ಳಬೇಕು. ಆಸುರೀಗುಣಗಳು ಬಂಧನಕ್ಕೆ ಸಿಲುಕಿಸುತ್ತವೆ. ಈ ಅಧ್ಯಾಯದಲ್ಲಿ ಶ್ರೀಕೃಷ್ಣನು ಎಚ್ಚರಿಕೆಯನ್ನು ಕೊಡುತ್ತಾನೆ : ನರಕಕ್ಕೆ ಮೂರುವಿಧವಾದ ದ್ವಾರಗಳು : ಅವೆಂದರೆ ಕಾಮ, ಕ್ರೋಧ ಮತ್ತು ಲೋಭ ಆದ್ದರಿಂದ ಸರ್ವಥಾ ಅವುಗಳನ್ನು ತ್ಯಜಿಸಬೇಕು.

**೧೭ನೆಯ ಅಧ್ಯಾಯ : ಶ್ರದ್ಧಾತ್ರಯವಿಭಾಗ ಯೋಗ :** ಸಾಧಕನು ತಪಸ್ಸು, ದಾನ, ಯಜ್ಞ ಮೊದಲಾದ ಸಾಧನೆಗಳನ್ನು ಅವಶ್ಯವಾಗಿ ಕೈಗೊಳ್ಳಬೇಕು. ಅವುಗಳನ್ನು ಶ್ರದ್ಧೆಯಿಂದ ಮಾಡಬೇಕು. ಶ್ರದ್ಧೆಯಲ್ಲಿ ಸಾತ್ವಿಕ, ರಾಜಸಿಕ ಮತ್ತು ತಾಮಸಿಕ ಎಂಬ ಸ್ತರಗಳಿವೆ. ಅವುಗಳಲ್ಲಿ ಸಾತ್ವಿಕವಾದ ಶ್ರದ್ಧೆಯಿಂದ ಕೂಡಿ ಭಕ್ತನು ಸಾಧನೆಯನ್ನು ಕೈಗೊಳ್ಳಬೇಕು.

**೧೮ನೆಯ ಅಧ್ಯಾಯ : ಮೋಕ್ಷಸಂನ್ಯಾಸಯೋಗ :** ಇಲ್ಲಿಗೆ ಗೀತೆಯ ಸಮಸ್ತ ಉಪದೇಶವು ಮುಗಿಯಿತು. ಈ ಅಧ್ಯಾಯದಲ್ಲಿ ತಾನು ಹೇಳಿದ ಉಪದೇಶವನ್ನೆಲ್ಲವನ್ನೂ ಸಾರಭೂತವಾಗಿ ಶ್ರೀಕೃಷ್ಣನು ನೀಡುವನು. ಸಾಧನೆಯ ಉಚ್ಚ ಆದರ್ಶ ಸಂನ್ಯಾಸ. ಆಸೆಗಳನ್ನು ಇಟ್ಟುಕೊಂಡು ಮಾಡುವ ಕರ್ಮಗಳನ್ನು ತ್ಯಾಗ ಮಾಡುವುದೇ ನಿಜವಾದ ಸಂನ್ಯಾಸ. ಹಾಗೆಯೇ ಸಾಧಕನು ತಾನು ಮಾಡುವ ಕರ್ಮದ ಫಲವನ್ನು ಭಗವಂತನಿಗೆ ಸಮರ್ಪಿಸಬೇಕು. ಇದೇ ಸಂನ್ಯಾಸದ ನಿಜವಾದ ಲಕ್ಷಣ. ಹೀಗೆ ಕರ್ಮ ಮತ್ತು ಕರ್ಮಫಲಗಳಲ್ಲಿ ಸಂಗವನ್ನು ತ್ಯಜಿಸಿದವನು ಬ್ರಹ್ಮಭಾವದಿಂದ ಕೂಡಿದವನಾಗುತ್ತಾನೆ. ಅವನು ಶೋಕಿಸುವುದಿಲ್ಲ; ಯಾವುದಕ್ಕೂ ಆಶಿಸುವುದಿಲ್ಲ. ಎಲ್ಲ ಜೀವರಾಶಿಗಳನ್ನು ಸಮನಾಗಿ ನೋಡುತ್ತಾನೆ. ಅಂಥವನು ಶ್ರೇಷ್ಠವಾದ ಭಕ್ತಿಯನ್ನು ಹೊಂದುತ್ತಾನೆ. ಭಕ್ತಿಯಿಂದಲೇ ಭಗವಂತನ ತತ್ತ್ವವನ್ನು ತಿಳಿದುಕೊಳ್ಳಬಹುದು. ತತ್ತ್ವವನ್ನು ತಿಳಿದುಕೊಂಡವನು ಭಗವಂತನ ಭಾವವನ್ನು ಪಡೆಯುತ್ತಾನೆ. ಶ್ರೀಕೃಷ್ಣನು ಸಾಧಕರಿಗೆ ಈ ಸಂದೇಶವನ್ನು ನೀಡುವನು: ''ಮನಸ್ಸಿನ ಎಲ್ಲ ಕರ್ಮಗಳನ್ನು ನನ್ನಲ್ಲಿ ತ್ಯಾಗಮಾಡಿ, ಬುದ್ಧಿಯೋಗವನ್ನು (ಜ್ಞಾನಯೋಗ) ಆಶ್ರಯಿಸಿ, ಎಂದೆಂದಿಗೂ ನನ್ನಲ್ಲಿಯೇ ಮನಸ್ಸನ್ನು ತೊಡಗಿಸಿಕೋ.'' ತನ್ನ ಉಪದೇಶದ ಅಂತ್ಯದಲ್ಲಿ ಶರಣಾಗತ ಭಾವವನ್ನು ಶ್ರೀಕೃಷ್ಣನು ಪ್ರತಿಪಾದಿಸುತ್ತಾನೆ. ''ನೀನು ನನ್ನನ್ನು ಶರಣು ಹೊಂದಿದರೆ, ಎಲ್ಲ ಪಾಪಗಳಿಂದಲೂ ನಿನ್ನನ್ನು ಮುಕ್ತನನ್ನಾಗಿ ಮಾಡುತ್ತೇನೆ'' ಎನ್ನುತ್ತಾನೆ. ಭಗವದ್ಗೀತೆಯ ಅಂತಿಮ ಶ್ಲೋಕವು ಮಾನವನ ಜೀವನದಲ್ಲಿ ಭಗವಂತನು ವಹಿಸುವ ಮಹತ್ತರವಾದ ಪಾತ್ರವನ್ನು ಎತ್ತಿಹೇಳುತ್ತದೆ. ಭಗವಂತನ ಸಹಾಯದಿಂದ ಮಾತ್ರವೇ ಮನುಷ್ಯನು ತನ್ನೆಲ್ಲ ಕಾರ್ಯಗಳಲ್ಲಿ ವಿಜಯವನ್ನು ಪಡೆಯಲು ಸಾಧ್ಯ ಎಂದು ಪ್ರತಿಪಾದಿಸುತ್ತದೆ.

## ಉಪಸಂಹಾರ

ಆಧುನಿಕ ಕಾಲದಲ್ಲಿ ಭಗವದ್ಗೀತೆಯ ಆದರ್ಶಗಳನ್ನು ತಮ್ಮ ಜೀವನದಲ್ಲಿ ಯಥಾವತ್ತಾಗಿ ಆಚರಿಸಿ ತೋರಿಸಿದವರೆಂದರೆ ಶ್ರೀರಾಮಕೃಷ್ಣರು. ಅವರು ಹೇಳುತ್ತಾರೆ: ''ಗೀತೆಯನ್ನು ಪೂರ್ಣವಾಗಿ ಓದದೆ ಇದ್ದರೂ ಸರಿಯೆ. ಹತ್ತು ಸಲ 'ಗೀತಾ', 'ಗೀತಾ' ಎಂದು ಉಚ್ಚರಿಸಿದರೆ ಅದು ಏನಾಗುವುದೋ ಅದೇ ಗೀತೆಯ ಸಾರ. ಅಂದರೆ ತ್ಯಾಗಿ ಎಂದು. 'ಹೇ ಜೀವ, ಎಲ್ಲವನ್ನೂ ತ್ಯಜಿಸಿ, ಭಗವಂತನನ್ನು ಆರಾಧಿಸು' ಎಂದು. ಇದೇ ಗೀತೆಯ ಸಾರ ವಿಷಯ. ತ್ಯಾಗ ಮತ್ತು ನಿರಾಸಕ್ತಿಗಳನ್ನು ಭಕ್ತಿಯೋಗ, ಕರ್ಮಯೋಗ ಮತ್ತು ಧ್ಯಾನಯೋಗಗಳ ಸಂಯುಕ್ತ ಅಭ್ಯಾಸದಿಂದ ಬೆಳೆಸಿಕೊಂಡು, ಜ್ಞಾನವನ್ನು ಪಡೆಯಬೇಕು; ಜ್ಞಾನದ ಮೂಲಕ ಮೋಕ್ಷವನ್ನು ಪಡೆಯಬೇಕು. ಇದೇ ಭಗವದ್ಗೀತೆಯು ಉಪದೇಶಿಸುವ ಯೋಗೋಪದೇಶದ ತಿರುಳು. ಇದೇ ಈ ಪವಿತ್ರ ಗ್ರಂಥದ ಪ್ರತಿಯೊಂದು ಅಧ್ಯಾಯದಲ್ಲಿಯೂ ಪ್ರತಿಫಲಿತವಾಗಿದೆ. ಹೀಗಾಗಿ ಭಗವದ್ಗೀತೆಯು ನಿಜವಾದ ಅರ್ಥದಲ್ಲಿ ಯೋಗಶಾಸ್ತ್ರವಾಗಿದೆ.